# ಕರ್ನಾಟಕ ವಿಧಾನ ಪರಿಷತ್ತು

## ಲಘು ಪ್ರಕಟಣೆ ಭಾಗ - 2

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

ಶುಕ್ರವಾರ, ದಿನಾಂಕ: 03ನೇ ಜನವರಿ 2020

*****

**ಸಂಖ್ಯೆ: 42**

2020ನೇ ಸಾಲಿನ ಕ್ಯಾಲೆಂಡರ್, ಶಾಸಕರ ದಿನಚರಿ ಪುಸ್ತಕ ಹಾಗೂ ಟೇಬಲ್ ಕ್ಯಾಲೆಂಡರ್‌ಗಳನ್ನು ಕಳೆದ ಸಾಲಿನಲ್ಲಿ ವಿತರಿಸಲಾದ ರೀತ್ಯಾ ವಿಧಾನ ಪರಿಷತ್ತಿನ ಮಾನ್ಯ ಶಾಸಕರುಗಳಿಗೆ ತಲಾ 5 ಕ್ಯಾಲೆಂಡರ್ ಮತ್ತು ಶಾಸಕರ ದಿನಚರಿ ಪುಸ್ತಕಗಳನ್ನು ಮತ್ತು 2 ಟೇಬಲ್ ಕ್ಯಾಲೆಂಡರ್‌ಗಳನ್ನು ವಿತರಿಸಲಾಗುವುದು.

ಪ್ರಸ್ತುತ ಸರ್ಕಾರಿ ಮುದ್ರಣಾಲಯದಿಂದ ಸ್ವೀಕೃತವಾಗಿರುವ ಕ್ಯಾಲೆಂಡರ್‌ಗಳನ್ನು ಮಾತ್ರ ವಿಧಾನಸೌಧದ ಮೊದಲನೆ ಮಹಡಿಯಲ್ಲಿರುವ ಸೂಚನಾ ಪತ್ರ ಶಾಖೆ (ಕೊಠಡಿ ಸಂಖ್ಯೆ 104) ಯಲ್ಲಿ ವಿತರಿಸಲಾಗುತ್ತಿದ್ದು, ಶಾಸಕರ ದಿನಚರಿ ಮತ್ತು ಟೇಬಲ್ ಕ್ಯಾಲೆಂಡರ್‌ಗಳನ್ನು ಮುದ್ರಣಾಲಯದಿಂದ ಸ್ವೀಕರಿಸಿದ ನಂತರ ವಿತರಿಸಲಾಗುವುದೆಂದು ಈ ಮೂಲಕ ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಶಾಸಕರುಗಳಿಗೆ ತಿಳಿಯಪಡಿಸಲಾಗಿದೆ

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

**ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಶಾಸಕರುಗಳಿಗೆ**